# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೨೭, ಫೆಬ್ರವರಿ, ೨೦೨೬(ಫಾಲ್ಗುಣ, ೦೮, ಶಕವರ್ಷ, ೧೯೪೭)<br>BENGALURU, FRIDAY, 27, FEBRUARY, 2026(PHALGUNA , 08, SHAKAVARSHA, 1947) | ನಂ. ೧೭೯<br>No.179 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ಇಪಿ 186 ಡಿಪಿಐ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 27.02.2026.

## ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14) ರ ಕಲಂ-3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಮತ್ತು ತನ್ಮೂಲಕ ಅಗತ್ಯಪಡಿಸಲಾದಂತೆ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026ರ ಕರಡನ್ನು ದಿನಾಂಕ21.01.2026ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ ಭಾಗ-IVA (ಸಂಖ್ಯೆ: 89) ರಲ್ಲಿ ಪ್ರಕಟಿಸಿ, ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ;

ಸದರಿ ವಿಶೇಷ ಸಂಚಿಕೆಯ ರಾಜ್ಯ ಪತ್ರವನ್ನು ದಿನಾಂಕ: 21.01.2026 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡು ತಿದ್ದುಪಡಿ ನಿಯಮಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗಿರುವ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಲಾಗಿದೆ.

ಈಗ ಕರ್ನಾಟಕ ನಾಗರಿಕ ಸೇವೆಗಳು ಅಧಿನಿಯಮ 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡು 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸಿದೆ ಎಂದರೆ:-

## ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಕರ್ನಾಟಕ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಯಾಗತಕ್ಕದ್ದು.

2. **ಕೋಷ್ಟಕದ ತಿದ್ದುಪಡಿ:** ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1967ರ ಕೋಷ್ಟಕದಲ್ಲಿ "ಶ್ರೇಣಿ III ಪತ್ರಾಂಕಿತವಲ್ಲದ ಹುದ್ದೆಗಳು" ಶೀರ್ಷಿಕೆಯಡಿಯಲ್ಲಿ ಕ್ರಮ ಸಂಖ್ಯೆ: 64-ಎ ರಲ್ಲಿನ "ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು" "ನೇಮಕಾತಿ ವಿಧಾನ" ಅಂಕಣ ಸಂಖ್ಯೆ (3) ರಲ್ಲಿನ ನಮೂದುಗಳ ಬದಲಿಗೆ ಈ ಕೆಳಕಂಡ ನಮೂದುಗಳನ್ನು ಪ್ರತಿಸ್ಥಾಪಿಸತಕ್ಕದ್ದು:-

   "ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದದಿಂದ ಅನುಕ್ರಮವಾಗಿ 2:1ರ ಅನುಪಾತದಲ್ಲಿ ಮುಂಬಡ್ತಿ ಮೂಲಕ ಪ್ರತಿ 3ನೇ ರಿಕ್ತಸ್ಥಾನವನ್ನು ಪದವೀಧರ ಪ್ರಾಥಮಿಕ ಶಿಕ್ಷಕರಿಂದ ತುಂಬತಕ್ಕದ್ದು.

   ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಹಾಗೂ ಸರ್ಕಾರಿ ಪ್ರೌಢಶಾಲೆಗಳಲ್ಲಿನ ಸಹಶಿಕ್ಷಕರುಗಳಿಗೆ ಗ್ರೇಡ್-II ವೃಂದಗಳಿಗೆ ಮುಂಬಡ್ತಿ ಹೊಂದಲು ಅವಕಾಶವಿದ್ದು, ಮುಂಬಡ್ತಿಗೆ ಅರ್ಹರಿರುವ ಈ ಎರಡೂ ವೃಂದಗಳ ಶಿಕ್ಷಕರಿಂದ ಮುಂಬಡ್ತಿ ನೀಡುವ ಮೊದಲು ಹಿಂದಕ್ಕೆ ಪಡೆಯಲಾಗದ ಅಭಿಮತವನ್ನು ಪಡೆಯತಕ್ಕದ್ದು".

   ಟಿಪ್ಪಣಿ: 1 ರಿಂದ 5 ನೇ ತರಗತಿಗೆ ಭೋಧಿಸುವ ಪ್ರಾಥಮಿಕ ಶಾಲಾ ಶಿಕ್ಷಕರು ಎನ್.ಸಿ.ಟಿ.ಇ., ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇರುವಂತೆ ಅಗತ್ಯ ವಿಷಯಗಳಲ್ಲಿ ಪದವಿಯನ್ನು ಹೊಂದಿದ್ದಲ್ಲಿ, 6 ಮತ್ತು 7ನೇ ತರಗತಿಗೆ ಬೋಧಿಸಲು ಅರ್ಹರಾಗತಕ್ಕದ್ದು.

   (2) ಅಂಕಣ (4) ರಲ್ಲಿನ ನಮೂದುಗಳ ಬದಲಿಗೆ ಈ ಕೆಳಕಂಡ ನಮೂದುಗಳನ್ನು ಪ್ರತಿಸ್ಥಾಪಿಸತಕ್ಕದ್ದು.

   (i) ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ಆಗಿದ್ದಲ್ಲಿ, ಸದರಿ ವೃಂದದಲ್ಲಿ 12 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು

   (ii) ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ಆಗಿದ್ದಲ್ಲಿ, ಸದರಿ ವೃಂದದಲ್ಲಿ 12 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸೇವೆ ಸಲ್ಲಿಸಿರತಕ್ಕದ್ದು:

ಪರಂತು, ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5ನೇ ತರಗತಿ) ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿ) ವೃಂದದಿಂದ ಮೇಲಿನ ಅನುಪಾತದ ಪ್ರಕಾರ ಅವಶ್ಯಕ ಸಂಖ್ಯೆಯಲ್ಲಿ ಮುಂಬಡ್ತಿಗೆ ಅರ್ಹ ಶಿಕ್ಷಕರು ಲಭ್ಯವಿಲ್ಲದಿದ್ದರೆ, ಯಾವುದೇ ಕಾರಣದಿಂದ ಅನುಕ್ರಮವಾಗಿ ಸದರಿ ವೃಂದಗಳಲ್ಲಿ ಜೇಷ್ಠತೆಯನುಸಾರ ಅರ್ಹರಿರುವ ಶಿಕ್ಷಕರು ಮುಂಬಡ್ತಿ ಪಡೆಯಲು ನಿರಾಕರಿಸಿದಲ್ಲಿ ಅಥವಾ ಮುಂಬಡ್ತಿ ವರ್ತುಲದಲ್ಲಿ ಮುಂಬಡ್ತಿಗೆ ಪರಿಗಣಿಸಲು ನಿಯಮಾನುಸಾರ ಅರ್ಹರಿಲ್ಲದಿದ್ದಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಇನ್ನೊಂದು ವೃಂದದಲ್ಲಿನ ಜೇಷ್ಠತೆಯನುಸಾರ ಅರ್ಹರಿರುವ ಶಿಕ್ಷಕರನ್ನು ಮುಂಬಡ್ತಿಗೆ ಪರಿಗಣಿಸತಕ್ಕದ್ದು. ಆದಾಗ್ಯೂ, ಈ ರೀತಿ ಅನುಕ್ರಮವಾಗಿ ಆಯಾ ವೃಂದಕ್ಕೆ ಮುಂಬಡ್ತಿಯಲ್ಲಿ ನಷ್ಟವಾದ ಹುದ್ದೆಗಳನ್ನು ಮುಂದಿನ ಮುಂಬಡ್ತಿಗಳಲ್ಲಿ ಸರಿದೂಗಿಸತಕ್ಕದ್ದು".

ಟಿಪ್ಪಣಿ: 1 ರಿಂದ 5 ನೇ ತರಗತಿಗೆ ಭೋಧಿಸುವ ಪ್ರಾಥಮಿಕ ಶಾಲಾ ಶಿಕ್ಷಕರು ಎನ್.ಸಿ.ಟಿ.ಇ., ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಮತ್ತು ಪದವೀಧರ ಪ್ರಾಥಮಿಕ ಶಿಕ್ಷಕರ ಹುದ್ದೆಗೆ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇರುವಂತೆ ಅಗತ್ಯ ವಿಷಯಗಳಲ್ಲಿ ಪದವಿಯನ್ನು ಹೊಂದಿದ್ದಲ್ಲಿ, 6 ಮತ್ತು 7ನೇ ತರಗತಿಗೆ ಬೋಧಿಸಲು ಅರ್ಹರಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಮಲ್ಲಿಕಾರ್ಜುನ ರಾಮಚಂದ್ರಪ್ಪ),**
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ),
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

## GOVERNMENT OF KARNATAKA

No.EP 186 DPI 2025

Karnataka Government Secretariat
M.S.Building,
Dr|| B.R. Ambedkar Veedhi,
Bengaluru, Dated: 27.02.2026.

## NOTIFICATION

Whereas the draft of the Karnataka Education Department Services (Department of Public Instruction) (Recruitment) (Amendment) Rules, 2026 was published as required by clause (a) of sub-section (2) of section 3 read with Section 8 of the Karnataka State Civil Services Act, 1978 (Karnataka Act 14 of 1990) dated: 21.01.2026 in Part-IVA (No.89) of the Karnataka Gazette Extraordinary inviting objections and suggestions from all persons likely to be affected thereby within fifteen days from the date of its publication in the official Gazette.

Whereas the said Gazette was made available to the public on 21.01.2026.

And whereas the objections and suggestions received from the public have been considered by the Government.

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules further to amend the Karnataka Education Department Services (Department of Public Instruction) (Recruitment) Rules, 1967, namely.

## RULES

1. **Title and commencement.-** (1) These rules may be called the Karnataka Education Department Services (Department of Public Instruction) (Recruitment) (Amendment) Rules, 2026.

(2) They shall come into force from date of their final publication in the Official Gazette.

2. **Amendment of Schedule.-** In the Karnataka Education Department Services (Department of Public Instruction) (Recruitment) Rules, 1967, in the schedule, under the heading 'Class III NON GAZETTED posts',- in the entries relating to the posts of "Primary School Head Masters" at serial no. 64-A under the "Method of Recruitment", - for the entries relating to the column (3) the following shall be substituted namely:-

> "By promotion from the cadre of Primary School Teacher (Class 1 to 5) and Graduate Primary Teacher (Class 6 to 8) in the ratio of 2:1 respectively every 3rd vacancy shall be filled from GPT.
>
> As there is an opportunity for promotion to both the posts of Headmaster of Government Higher Primary Schools and Secondary Schools Assistant Teacher (Grade-II) cadre of Government High Schools from the cadres of Primary School Teacher (Classes 1 to 5) and Graduate Primary Teacher (Classes 6 to 8), it is essential to get the irrevocable option before giving the promotion from the eligible teachers of these two cadres".
>
> "Note:- Primary School Teachers teaching for Class 1 to 5 who are possessing Graduation in the necessary subjects specified in NCTE Guidelines and in the existing Cadre & Recruitment Rules for the post of Graduate Primary Teachers shall be eligible to teach for classes 6 and 7".

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(2) For the entries relating to Column (4) the following shall be substituted namely:-

(i) If from the cadre of Primary School teacher(Class 1 to 5) must have served in the cadre for not less than 12 years:

(ii) If from the cadre of Graduate Primary Teacher(Class 6 to 8) must have served in the cadre for not less than 12 years:

Provided that, if sufficient number of teachers eligible for promotion from the Primary School Teacher (Class 1 to 5) cadre and from the Graduate Primary Teacher (Class 6 to 8) cadre are not available as per the above ratio, if the eligible teachers of the respective cadre based on the seniority refuse the promotion for any reason or are not eligible to be considered in that promotion cycle as per rules, the eligible teachers of the other cadre based on the seniority may be considered for promotion in the interest of administration. However, the posts lost in the promotion for the respective cadre shall be compensated in the next promotions".

"Note:- Primary School Teachers teaching for Class 1 to 5 who are possessing Graduation in the necessary subjects specified in NCTE Guidelines and in the existing Cadre & Recruitment Rules for the post of Graduate Primary Teachers shall be eligible to teach for Classes 6 and 7".

By Order and in the name of the
Governor of Karnataka,

**(Mallikarjuna Ramachandrappa)**
Under Secretary to Government (Admin)
Department of School Education & Literacy

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH